## ಅಳಿಯನ ಡಿಮ್ಯಾಂಡ್

ಮೊದಲ ದೀಪಾವಳಿಗೆ ಹೋಗುವ ಅಳಿಯ ಪತ್ನಿಗೆ ಹೇಳಿದ. 'ನೋಡು ನಿಮ್ಮಪ್ಪಂಗೆ ಹೇಳು. ನನಗೆ ಫೋರ್ಡ್ ಕಾರು ಕೊಡಿಸಿದರೆ ಮಾತ್ರ ದೀಪಾವಳಿಗೆ ನಿಮ್ಮ ಮನೆಗೆ ಬರೋದು...' ಪತ್ನಿ ಸ್ವಾಟೆ ತಿರುವಿ ಹೇಳಿದಳು. 'ಕಾರ್ ಏಕೆ, ರೈಲೇ ಕೊಡಿಸ್ತಾರಂತೆ. ಆದರೆ, ಅದಕ್ಕೂ ಮೊದಲು ನಮ್ಮ ಮನೆಯಿಂದ ನಿಮ್ಮ ಮನೆಯವರೆಗೆ ರೈಲ್ವೆ ಹಳಿ ಹಾಕಿಸಲು ನಿಮ್ಮಪ್ಪನಿಗೆ ಹೇಳಿ!'



## ನಿದ್ರಿಸಿ

ಅದೊಂದು ಜೀವ ವಿಮಾ ಕಚೇರಿ. ಅಲ್ಲೊಬ್ಬ ನೌಕರ ಸದಾ ಕುರ್ಚಿಗೊರಗಿ ನಿದ್ರಿಸುತ್ತಿದ್ದ. ಎಚ್ಚರಿಕೆ ಕೊಟ್ಟು ಕೊಟ್ಟು ಸಾಕಾದ ಮೆನೇಜರ್ ಸಾಹೇಬರು ಅವನ ಕುರ್ಚಿಯ ಹಿಂಬದಿಯ ಗೋಡೆಗೆ ಹೀಗೆಂದು ಬರೆಸಿದರು. 'ನನ್ನ ಹಾಗೆಯೇ ನೀವು ಜೀವ ವಿಮೆ ಪಾಲಿಸಿ ಕೊಳ್ಳಿರಿ, ನಿರಾಂತಕದಿಂದ ನಿದ್ರಿಸಿರಿ'.

## ಮಾತು ಮೀರದ ಹೆಂಡತಿ

ಗುಂಡ ಸ್ನೇಹಿತನಿಗೆ ಹೀಗೆ ಹೇಳಿದ. 'ನನ್ನ ಹೆಂಡತಿ ನನ್ನ ಮಾತು ಮೀರುವುದೇ ಇಲ್ಲ, ನೋಡು ಬೆಳಿಗ್ಗೆ ಎದ್ದ ತಕ್ಷಣ ಉಪ್ಪು ಬೇಕು ಎಂದೆ, ತಂದುಕೊಟ್ಟಳು, ಹುಣಸೆಹಣ್ಣು, ಸಬೀನಾ ಎಲ್ಲವನ್ನೂ ತುಟಿ ಪಿಟಿಕ್ ಎನ್ನದೇ ತಂದಿಟ್ಟಳು. 'ಅದೆಲ್ಲ ಸರಿ, ಬೆಳಿಗ್ಗೆ ಎದ್ದ ತಕ್ಷಣ ನಿನಗೆ ಹುಣಸೆಹಣ್ಣು, ಉಪ್ಪು, ಸಬೀನಾ ಏಕೆ ಬೇಕು?' ಎಂದು ಸ್ನೇಹಿತ ಕೇಳಿದ. ಅದಕ್ಕೆ ಮರು ಉತ್ತರಿಸಿದ ಗುಂಡ, 'ಇನ್ನೇಕೆ, ರಾತ್ರಿಯ ಮುಸುರೆ ಪಾತ್ರೆ ಒಂದು ರಾಶಿ ಬಿದ್ದಿರುತ್ತಲ್ಲ, ಅದನ್ನೆಲ್ಲ ಬೇಗ ತೊಳೆದಿಟ್ಟರೆ ತಾನೇ ಬಟ್ಟೆ ಒಗೆಯೋಕೆ ಟೈಂ ಸಿಗೋದು' ಎಂದ!

## ಸ್ಪರ್ಧೆ

ಎದುರು ಬದುರಿನ ಆ ಎರಡೂ ಮೊಬೈಲ್ ಅಂಗಡಿಗಳಲ್ಲಿ ದರಗಳ ಪೈಪೋಟಿ. ಒಬ್ಬ ಮಾಲೀಕ 'ಕೇವಲ ₹150ಗೆ ಜನಪ್ರಿಯ ಕಂಪನಿಯ ಮೊಬೈಲ್ ದೊರೆಯುತ್ತದೆ' ಎಂದು ಬೋರ್ಡ್ ಹಾಕಿದ. ಮರುದಿನ ಎದುರಿನ ಅಂಗಡಿಯವನ ಬೋರ್ಡ್ ಹೀಗಿತ್ತು...'ನಾವು ₹150ಗೆ ರೂಪಾಯಿಯ ಮೊಬೈಲ್‌ಗಳನ್ನು ರಿಪೇರಿ ಮಾಡಿಕೊಡುತ್ತೇವೆ'.

## ರಾಂಗ್ ನಂಬರ್

ಪತ್ನಿ (ಮೊಬೈಲ್ ಕಿವಿ ಬಳಿ ಹಿಡಿದುಕೊಂಡು): ಹಲೋ... ಹಲೋ...

ಪತಿ: ಯಾರು?

ಪತ್ನಿ: ನಾನು ಕಣ್ರೀ, ನಿಮ್ಮ ಹೆಂಡ್ತಿ ಬೆಳಿಗ್ಗೆ ಹೇಳಿದ್ದೆನಲ್ಲ, ರೇಷ್ಮೆ ಸೀರೆ ತನ್ನಿ ಅಂತ... ಮರೆತುಬಿಟ್ಟೀರಾ?

ಪತಿ: 'ಕೌನ್ ಬೋಲ್ ರಹಾ ಹೈ ಜೀ? ರಾಂಗ್ ನಂಬರ್!

## ವಯಸ್ಸು ಗೊತ್ತಾ?

ಪತ್ನಿ ಅತಿ ವೇಗವಾಗಿ ಕಾರು ಓಡಿಸುವುದನ್ನು ಕಂಡು ಭಯಭೀತನಾದ ಪತಿ ಹೇಳಿದ. 'ಸ್ವಲ್ಪ ನಿಧಾನವಾಗಿ ಹೋಗು ಪ್ರಿಯೆ, ಅತಿ ವೇಗ ಅಪಘಾತಕ್ಕೆ ಮೂಲ. ಕಾರು ಡಿಕ್ಕಿಯಾಗಿ ನೀನು ಸತ್ತು ಹೋದಿ ಅಂತ ಇಟ್ಕೋ, ಪೇಪರ್‌ನವರು ಮಾರನೇ ದಿನ ಪ್ರಿಂಟ್ ಮಾಡುತ್ತಾರೆ. ಅದರಲ್ಲಿ ದಪ್ಪಕ್ಷರದಲ್ಲಿ ನಿನ್ನ ವಯಸ್ಸು ಬರೆದು ಬಿಡ್ತಾರೆ! ತಕ್ಷಣ ಕಾರಿನ ವೇಗ 140 ರಿಂದ 60ಕ್ಕಿಳಿದಿತ್ತು!.

## ನಿನ್ನೆ ಮಾಡಿದ್ದಲ್ಲ!

ಬಾಸ್: ಏನಯ್ಯಾ ತಿಂಡಿ ತಿಂದವನು ಬಾಯಿ ತೊಳಕೊಂಡು ಬರೋಕಾಗಲ್ವ? ನಿನ್ನ ಗಲ್ಲಕ್ಕೆ ಹತ್ತಿರೋ ಎಂಜಲಿನಿಂದಲೇ ಬೆಳಿಗ್ಗೆ ನೀನೇನು ತಿಂದಿ ಅಂತ ಹೇಳಬಹುದು.

ವಾಚ್‌ಮನ್: ಹಾಗಾದರೆ ನಾನೇನು ತಿಂದಿದೀನಿ ಹೇಳಿ ಸಾರ್ ನೋಡೋಣ.

ಬಾಸ್: ಚಿತ್ರಾನ್ನ ತಾನೇ?

ವಾಚ್‌ಮನ್ – ಇಲ್ಲಾ ಸಾರ್, ಅದು ನಿನ್ನೆ ರಾತ್ರಿ ತಿಂದಿದ್ದು!

(ಸಂಗ್ರಹ) ಕೆ. ಶ್ರೀನಿವಾಸರಾವ್, ಹರಪನಹಳ್ಳಿ


